## ನನ್ನ ಓದು

ಆರೋಗ್ಯಕರ ಸಮಾಜ ಹಾಗೂ ದೇಶವನ್ನು ಮರುಕಟ್ಟುವುದಕ್ಕೆ ಬೇಕಾದ ರಾಜಕೀಯ ಪ್ರಜ್ಞೆಯನ್ನು ನೆಲೆಗೊಳಿಸುವ ಕಾರಣಕ್ಕೆ ಮುಖ್ಯವಾಗುತ್ತದೆ. ಇದು ಚಿಂತಕರೊಬ್ಬರ ಸಾಮಾಜಿಕ ಹೊಣೆಗಾರಿಕೆಯ ಜವಾಬ್ದಾರಿಯುತ ನಡೆಯಾಗಿದೆ. ಕನ್ನಡದ ಚಿಂತನಾ ಪರಂಪರೆಯಲ್ಲಿ ಬಹುತ್ವವನ್ನು ಇಷ್ಟು ವಿಸ್ತಾರವಾದ ಪದರುಗಳಲ್ಲಿ ಚಿಂತನೆಗೆ ಒಡ್ಡಿ, ಬಹುತ್ವದ ಬಗೆಗಿನ ಜನಪ್ರಿಯ ತಿಳಿವನ್ನು ಪಲ್ಲಟಗೊಳಿಸುವ ಕೃತಿಗಳು ಈ ಹಿಂದೆ ಬಂದಿಲ್ಲ. ಈ ಕಾರಣಕ್ಕೆ ಎಲ್ಲರೂ ಓದಿ ಚರ್ಚಿಸಬಹುದಾದ, ನಮ್ಮ ನಮ್ಮ ನೆಲೆಗಳಲ್ಲಿ ವಿಸ್ತರಿಸಬಹುದಾದ ಕನ್ನಡದ ಬಹಳ ಮುಖ್ಯ ಕೃತಿಯಾಗಿ 'ಬಹುತ್ವ ಕರ್ನಾಟಕ' ಕೃತಿ ಗಮನ ಸೆಳೆಯುತ್ತದೆ.

ಈ ಕೃತಿಯು ಒಳ ಹೆಣಿಗೆಯಲ್ಲಿ ವಿಜ್ಞಾನದ ಸೂತ್ರವನ್ನಾಧರಿಸಿ ರೂಪುಗೊಂಡಿದೆ. ತರ್ಕ, ಪ್ರಯೋಗ, ಅನ್ವಯಿಕತೆಯನ್ನು 'ಪರಿಕಲ್ಪನೆ', 'ಸಮಸ್ಯೆ', 'ಸಂಭವ' ಎನ್ನುವ ಮೂರು ನೆಲೆಗಳಲ್ಲಿ ಪರಿಶೀಲಿಸಿ 'ಕಾಣ್ಕೆ' ಎಂಬ ಪರ್ಯಾಯದ ಕನಸನ್ನೂ ಸದ್ಯದ ಅಧ್ಯಯನದ ಫಲಿತವನ್ನೂ ಕಾಣಿಸಲು ಪ್ರಯತ್ನಿಸಿದ್ದಾರೆ. ಈ ಅಧ್ಯಯನಕ್ಕೆ ಕರ್ನಾಟಕವನ್ನು ಬಯಲ ಪ್ರಯೋಗಾಲಯವಾಗಿ ಬಳಸಿದ್ದಾರೆ. ಹಾಗಾಗಿ ಈ ಅಧ್ಯಯನವು ವೈಜ್ಞಾನಿಕ ಚೌಕಟ್ಟಿನ ಮೈಪಡೆದಿದೆ. ಅದಕ್ಕಾಗಿ ವಿವಿಧ ವರ್ಗ ಮತ್ತು ಸಮುದಾಯಗಳ ದುಡಿಮೆ, ಕೌಶಲ, ಪ್ರತಿಭೆ ಮತ್ತು ಮನುಷ್ಯ ಸಂಬಂಧಗಳಿಂದ ರೂಪು ತಳೆದಿರುವ ಉತ್ಪಾದನ ಲೋಕಗಳನ್ನು ಎಡತಾಕಿದ್ದಾರೆ. ಈ ಲೋಕಗಳ ಜತೆ ಗಾಢ ಲಗತ್ತಿರುವ ಭಾಷೆ, ಸಮಾಜ, ಧರ್ಮ, ಚರಿತ್ರೆ ಮತ್ತು ರಾಜಕಾರಣಗಳ ಒಳ ಪ್ರವೇಶಿಸಿದ್ದಾರೆ. ಇವನ್ನು ಸೃಜನಶೀಲವಾಗಿ ಅನುಸಂಧಾನಿಸುವ ಸಾಹಿತ್ಯ, ರಂಗಭೂಮಿ, ಸಂಗೀತ, ಸಿನಿಮಾದಂತಹ ಕಲೆಗಳನ್ನು ಪರೀಕ್ಷೆಗೆ ಒಳಪಡಿಸಿದ್ದಾರೆ. ಸಮಾಜವಿಜ್ಞಾನಗಳು ಸೃಷ್ಟಿಸಿರುವ ತಿಳಿವಳಿಕೆ, ಈ ಪರಂಪರೆಯಲ್ಲಿ ಸಿಗುವ ಅನುಭವ, ಜ್ಞಾನ, ವಿವೇಕ, ಸಂವೇದನೆಗಳನ್ನು ಶೋಧಿಸಿ, ಸಂವಿಧಾನದ ಮೌಲ್ಯಗಳ ಜತೆ ಸಮೀಕರಿಸಲು ಪ್ರಯತ್ನಿಸುತ್ತಲೇ, ವರ್ತಮಾನದ ಮಾನವೀಯ ಆಂದೋಲನಗಳ ಜತೆ ಬಿರುಕಿಲ್ಲದೆ ಬೆಸೆಯಲು ಪ್ರಯತ್ನಿಸಿದ್ದಾರೆ. ಇದು ಈ ಕೃತಿಯ ಮಹತ್ವವನ್ನು ಮನಗಾಣಿಸುತ್ತಿದೆ.

ಈ ಕೃತಿಗಿರುವ ಒಂದು ಚಲನಶೀಲ ಗುಣವೆಂದರೆ, ಈ ಕೃತಿಯನ್ನು ಓದುವ ಯಾರೇ ಆದರೂ ತನಗೆ ಗೊತ್ತಿರುವ, ತನ್ನ ಅನುಭವ ಲೋಕದ, ತನ್ನ ಅರಿವಿನ ನೂರಾರು ಸಂಗತಿಗಳನ್ನು ಇಲ್ಲಿನ ವಿವರಗಳ ಜತೆ ಲಗತ್ತಿಸಿಕೊಂಡು ಓದುವ ಅನುಭವ ಪಡೆಯಬಹುದಾಗಿದೆ. ನಾನಂತೂ ಈ ಕೃತಿ ಓದುತ್ತಾ ಓದುತ್ತಾ ನನ್ನದೇ ಅರಿವಿನ ಲೋಕದ ಹಲವು ಘಟನೆ ವಿದ್ಯಮಾನಗಳನ್ನು ಸೇರಿಸಿಕೊಂಡು ಓದಿದ್ದೇನೆ. ಈ ಅರ್ಥದಲ್ಲಿ ಈ ಕೃತಿಗೆ ಓದುವ ಪ್ರತಿಯೊಬ್ಬರನ್ನೂ ಒಳಗು ಮಾಡಿಕೊಂಡು ಮುನ್ನಡೆಯುವ ಗುಣವಿದೆ. ಹಾಗೆಯೇ ಓದಿದವರು ಪ್ರಾದೇಶಿಕ ಫರಕುಗಳನ್ನು ದಾಖಲಿಸುತ್ತಾ ಹೋದರೆ ಬಹುತ್ವದ ಅಗಾಧತೆಯು ದಮನಕಾರಿಗಳನ್ನು ದಿಕ್ಕೆಡಿಸಬಹುದು. ಅದು ನಿಜಾರ್ಥದಲ್ಲಿ ಈ ಕೃತಿಯ ಪ್ರಯೋಜನಕಾರಿ ನಡೆಯಾಗಿದೆ.

ಇದೊಂದು ಬಹುತ್ವವೆಂಬ ಪರಿಕಲ್ಪನೆಯನ್ನು ಬಹುನೆಲೆಯಲ್ಲಿ ವಿಸ್ತರಿಸಿದ ಪುಸ್ತಕ. ಅಮೂರ್ತ ಸಂಗತಿಗಳನ್ನು ಮೂರ್ತರೂಪದಲ್ಲಿ ಕಾಣಿಸಲು ಪರಿಭಾಷೆ, ವ್ಯಕ್ತಿ, ಘಟನೆ, ವಿದ್ಯಮಾನಗಳನ್ನು ವಿಶ್ಲೇಷಣೆಯಲ್ಲಿ ಉಲ್ಲೇಖಿಸುತ್ತಾರೆ. ಹೀಗೆ ಉಲ್ಲೇಖಿಸಿದ ವಿಷಯಗಳ ಪ್ರಾಥಮಿಕ ಪರಿಚಯ ಇಲ್ಲದೆ ಹೋದರೆ, ಈ ಉಲ್ಲೇಖಗಳ ಗಹನತೆ ಅರ್ಥವಾಗದೆ ಹೋಗಬಹುದು. ಹಾಗಾಗಿ ಈ ಕೃತಿಯಲ್ಲಿ ಉಲ್ಲೇಖವಾಗುವ ನೂರಾರು ಸಂಗತಿಗಳು ಪುಟ್ಟ ಪುಟ್ಟ ಅಡಿಟಿಪ್ಪಣಿಗಳನ್ನು ಬಯಸುತ್ತವೆ ಎನಿಸಿತು.

ಒಮ್ಮೆ ತ್ರಿಪುರಾದ ಅಗರ್ತಲ ನಗರದ ಕೈಗಾರಿಕಾ ವಲಯವನ್ನು ಭೇಟಿ ಮಾಡಿದೆವು. ತ್ರಿಪುರಾ ಯಥೇಚ್ಚವಾಗಿ ಬಿದಿರು ಬೆಳೆಯುವ ಪ್ರದೇಶ. ಹಾಗಾಗಿ ಬಿದಿರಿನ ಬಳಕೆ ವ್ಯಾಪಕವಾಗಿದೆ. ಹೀಗಿರುವಾಗ ಕೈಗಾರಿಕೆಯಲ್ಲಿ ಬಿದಿರನ್ನು ಸಣ್ಣದಾಗಿ ಸೀಳಿ, ಸೀಳುಗಳಿಗೆ ಅಂಟು ದ್ರವ ಮತ್ತು ಗೋಲ್ಡನ್ ಬ್ರೌನ್ ಬಣ್ಣವನ್ನು ಮಿಶ್ರಣ ಮಾಡಿ, ಮರದ ದಿನ್ನೆಯಂತಹ ಚೌಕಟ್ಟಿನಲ್ಲಿ ಇವುಗಳನ್ನು ತುಂಬಿ ಯಂತ್ರದಿಂದ ಬಲವಾಗಿ ಒತ್ತಲಾಗುತ್ತದೆ. ಆಗ ಬಿದಿರಿನ ಸೀಳುಗಳು ಮರದ ದಿನ್ನೆಗಳಾಗಿ ಬದಲಾಗುತ್ತವೆ. ನಂತರ ಮರದಿಂದ ಮಾಡಬಹುದಾದ ಮೇಜು, ಮಂಚ, ಕುರ್ಚಿ ತರಹದ